| O.S 24/2014 | CW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 17.01.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಾದಃ ಶ್ರೀ MSR ರವರಿಂದ:-**

ಅಂದಾಜು 3 ವರ್ಷದ ಹಿಂದೆ ನಾನು ದಾವಾ ಸ್ವತ್ತುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಅಳತೆ ಮಾಡಲು ಹೋಗಿರುತ್ತೇನೆ. ನಾನು ಮೊದಲನೆ ಭಾರಿ ದಾವಾ ಆಸ್ತಿಯ ಬಳಿ ಹೋಗಿದ್ದಾಗ ಪಂಚಾಯಿತಿಯ ಅಧಿಕಾರಿಗಳು, ನಾವು ಪಾರ್ಟಿಗಳಿಗೆ ನೋಟಿಸು ಜಾರಿ ಮಾಡಬೇಕಾಗಿರುತ್ತದೆ ಎಂದು ಹೇಳಿ ಅಳತೆ ಆಗಿರುವುದಿಲ್ಲ. ನಂತರ ದಾವಾ ಆಸ್ತಿಯ ಬಳಿ ಅಳತೆ ಮಾಡಲು ಹೋದಾಗ ಗಲಾಟೆ ಆದ ಕಾರಣ ಪೊಲೀಸರ ಭದ್ರತೆಯ ಮೇರೆಗೆ ಅಳತೆ ಮಾಡಲು ಕೋರಿರುತ್ತೇವೆ. ಯಾರು ಯಾರು ಗಲಾಟೆ ಮಾಡಿರುತ್ತಾರೆ ಎಂದರೆ ಮರೆತು ಹೋಗಿರುತ್ತದೆ. ವಾದಿಯರು ಕುಡಿದು ಬಂದು ಗಲಾಟೆ ಮಾಡಿದ ಕಾರಣ ಅಳತೆ ಮಾಡಲು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ.

ವಾದಿ ಮತ್ತು ಪ್ರತಿವಾದಿ ಪರ ವಕೀಲರು ನೀಡಿರುವ memo of instruction ಪ್ರಕಾರ ನಾನು ಅಳತೆ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರು ತಮ್ಮ memo of instruction ಗಳಲ್ಲಿ ಕ್ರಯಪತ್ರದ ಪ್ರಕಾರ ಅಳತೆ ಮಾಡುವಂತೆ ಸೂಚಿಸಿದ್ದು ಹಾಗೆಯೇ ನಾನು ಅಳತೆ ಮಾಡಿರುತ್ತೇನೆ. ಎರಡನೇ ಸೂಚನೆಯ ಪ್ರಕಾರ ನಾನು ರಸ್ತೆಯ ಜಾಗವನ್ನು ಸೇರಿಸಿ ಅಳತೆ ಮಾಡಿರುತ್ತೇನೆ. ಮೂರನೆ ಸೂಚನೆಯ ಪ್ರಕಾರ ರಸ್ತೆಯನ್ನು ಅಳತೆ ಮಾಡಿ ಮತ್ತು ಅದರ ಚೆಕ್ಕುಬಂಧಿಯನ್ನು ಗುರುತಿಸಿ ಅಳತೆ ಮಾಡಿರುತ್ತೀರಾ ಎಂದರೆ ಹೌದು.

ಚಾಮರಾಜನಗರದಿಂದ ಚಾಟೀಪುರದ ಮೂಲಕ ಯಳಂದೂರಿಗೆ ಹೋಗಲು ಮುಖ್ಯ ರಸ್ತೆ ಇರುತ್ತದೆ ಎಂದರೆ ನಿಜ. ಸದರಿ ರಸ್ತೆಯಿಂದ ಪೂರ್ವ ದಿಕ್ಕಿಗೆ ಪ್ರತಿವಾದಿಗಳ ಜಮೀನಿನವರೆಗೂ ರಸ್ತೆ ಇರುತ್ತದೆ ಎಂದರೆ ನಿಜ. ಮುಖ್ಯರಸ್ತೆಯಿಂದ ವಾದಿಗಳ ಮನೆಯವರೆಗೂ 12 ಅಡಿ ಕಾಂಕ್ರೀಟ್ ರಸ್ತೆ ಇರುತ್ತದೆ ಎಂದರೆ ನಿಜ. ವಾದಿಗಳ ಮನೆಯಿಂದ ಪೂರ್ವ ದಿಕ್ಕಿಗೆ ಪ್ರತಿವಾದಿಗಳು ಬಿಟ್ಟಿರುವ 5 ಅಡಿಯ ಮಣ್ಣಿನ ರಸ್ತೆ ಇರುತ್ತದೆ ಎಂದರೆ ನಿಜ.

ಸಾಮಾನ್ಯವಾಗಿ ಸರಪಳಿಗಳ ಮೂಲಕ ಅಳತೆ ಮಾಡುವಾಗ ಸಹಾಯಕ್ಕಾಗಿ ಸಿಬ್ಬಂದಿಯನ್ನು ಕರೆದುಕೊಂಡು ಹೋಗುತ್ತೇವೆ ಎಂದರೆ ನಿಜ. ಆ ದಿನ ನಮ್ಮ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿರುತ್ತೇವೆ. ನಮ್ಮ ಹಿರಿಯ ಅಧಿಕಾರಿ ನಾಗಭೂಷಣ್ ನಮ್ಮ ಸಹಾಯಕ ಸಿಬ್ಬಂದಿ ರಮೇಶ್ ರವರನ್ನು ಕರೆದುಕೊಂಡು ಹೋಗಿರುತ್ತೇವೆ. ನನಗೆ ಸಹಾಯಕ ಸಿಬ್ಬಂದಿಯಾಗಿ ರಮೇಶ್ ರವರನ್ನು ನಮ್ಮ ಕಛೇರಿಯಿಂದಲೇ ಆದೇಶ ಮಾಡಿ ಕಳುಹಿಸಿರುತ್ತಾರೆ. ನಮ್ಮ ಹಿರಿಯ ಅಧಿಕಾರಿ ನಾಗಭೂಷಣ್ ರವರನ್ನು ನಮ್ಮ ಕಛೇರಿಯ ಅನುಮತಿಯ ಮೇರೆಗೆ ಕರೆದುಕೊಂಡು ಹೋಗಿರುತ್ತೇನೆ.

ಅಳತೆ ಮಾಡುವ ದಿನದಂದು ವಾದಿಯ ಕಡೆಯವರು ಸರಪಳಿಗಳನ್ನು ಹಿಡಿದುಕೊಂಡಿದ್ದರು ಎಂದರೆ ನನಗೆ ಒಬ್ಬನೇ ಹಿಡಿದುಕೊಳ್ಳಲು ಆಗಿರುವುದಿಲ್ಲ ಆದ್ದರಿಂದ ಸಹಾಯಕ್ಕಾಗಿ ವಾದಿಯ ಕಡೆಯವರು ಹಿಡಿದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಕ್ಷೆಯಲ್ಲಿ ವಾದಿಯರ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿಗೆ ನಾನು ನಕಾಷೆಯನ್ನು ಹಾಜರು ಮಾಡಿರುವುದಿಲ್ಲ ಹಾಗೆಯೇ ಸದರಿ ನಕಾಷೆಯಲ್ಲಿ ಪ್ರತಿವಾದಿಯರು ಬಿಟ್ಟಿರುವ ದಾರಿಯ ಬಗ್ಗೆಯೂ ಸಹ ಉಲ್ಲೇಖ ಇರುವುದಿಲ್ಲ ಎಂದರೆ ನಿಜ. ವಾದಿಯರು ಮಾಡಿರುವ ಕಾಂಕ್ರೀಟ್ ರಸ್ತೆಯ ಬಗ್ಗೆ ಮಾತ್ರ ನಾನು ನಕಾಷೆಯಲ್ಲಿ ಉಲ್ಲೇಖ ಮಾಡಿರುತ್ತೇನೆ.

ನನ್ನ ವರದಿಯಲ್ಲಿ ನಾನು ಪ್ರತಿವಾದಿಗಳ ಜಮೀನಿಗೆ ರಸ್ತೆ ಇರುತ್ತದೆ ಎಂದು ನನ್ನ ವರದಿಯಲ್ಲಿ ತೋರಿಸಿರುವಂತೆ ರಸ್ತೆ ಇರುತ್ತದೆ ಎಂದು ವರದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕಾಂಕ್ರೀಟ್ ರಸ್ತೆ ಇದ್ದರೂ ಸಹ ವಾದಿಗಳ ಮಾತು ಕೇಳಿಕೊಂಡು ನಾನು ನನ್ನ ವರದಿಯಲ್ಲಿ ರಸ್ತೆ ಇರುವುದಿಲ್ಲ ಎಂದು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನಿನ ಬಳಿ ಚರಂಡಿ ಇರುತ್ತದೆ. ವಾದಿಗಳ ಮನೆ ಮುಂದೆ ಚರಂಡಿ ಇರುತ್ತದೆ. ನನ್ನ ವರದಿಯಲ್ಲಿ ಪ್ರತಿವಾದಿಗಳ ಜಮೀನಿನ ಎರಡೂ ಕಡೆ ಚರಂಡಿ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ನಿಜ. ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಪ್ರತಿವಾದಿಗಳ ಜಮೀನಿನ ಎರಡೂ ಬದಿಯಲ್ಲೂ ಚರಂಡಿ ಇರುತ್ತದೆ ಮತ್ತು ವಾದಿಯ ಮನೆಯ ಮುಂದೆ ಚರಂಡಿ ಇರುತ್ತದೆ ಎಂಬುದು ವಾಸ್ತವ ಸಂಗತಿಯಾಗಿರುತ್ತದೆ. ಚರಂಡಿ ಇದ್ದರೂ ಸಹ ವಾದಿಯ ಮನೆಯ ಮುಂದೆ ಚರಂಡಿ ಇರುವುದಿಲ್ಲ ಎಂದು ಸುಳ್ಳು ವರದಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

| O.S 24/2014 | CW-1 |
|---|---|

ವಾದಿಯ ಮನೆಯ ಹಿಂಭಾಗದಿಂದ 2−3 ಜಮೀನುಗಳನ್ನು ಅಳತೆ ಮಾಡಿಕೊಂಡು ಬಂದಿರುತ್ತೇವೆ ಎಂದರೆ ನಿಜ. ಕ್ರಯಪತ್ರಗಳ ಪ್ರಕಾರ ವಾದಿಯರ ಆಸ್ತಿಯನ್ನು ಅಳತೆ ಮಾಡಿಕೊಂಡು ಬಂದಾಗ ಚರಂಡಿ ಪಕ್ಕದವರೆಗೂ ವಾದಿಯ ಆಸ್ತಿ ಇರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅಳತೆ ಮಾಡಿದಾಗ  ಓವರ್ ಲ್ಯಾಪ್ ಆಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯರಿಗೆ ಅನುಕೂಲವಾಗುವಂತೆ ನಾನು ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರ ಆಸ್ತಿಯನ್ನು ಸರಿಯಾಗಿ ಅಳತೆ ಮಾಡದೇ ಓವರ್ ಲ್ಯಾಪ್ ಆಗಿರುತ್ತದೆ ಮತ್ತು ರಸ್ತೆಯ ಮಧ್ಯಭಾಗದವರೆಗೂ ವಾದಿಯ ಮನೆ ಬರುತ್ತದೆ ಎಂದು ನಾನು ವರದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ವರದಿಯಲ್ಲಿ ವಾದಿಯರು ನನಗೆ ಕ್ರಯಪತ್ರ ಕೊಟ್ಟಿರುವುದಿಲ್ಲ ಆದ್ದರಿಂದ ನಾನು ಕ್ರಯಪತ್ರದ ಆಧಾರದ ಮೇರೆಗೆ ವರದಿ ಮಾಡಿರುವುದಿಲ್ಲ ಎಂದರೆ ನಿಜ. ನಾನು ವಾದಿಯ ಮಾತು ಕೇಳಿಕೊಂಡು ಯಾವುದೇ memo of instruction ಗಳನ್ನು ಪಾಲನೆ ಮಾಡದೇ ತಪ್ಪು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಅಂದಾಜಿನ ಮೇರೆಗೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಶವನ್ನು ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.